ಹೊಸ ಯೋಜನೆಗಳು

2002 (2401); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

1) ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಯೋಜನೆಗಳಾವವು; ಹೊಸ ಯೋಜನೆಗಳನ್ನು ಜಾರಿಗೆ ತರಲಾಗುವುದೇ;

2) ಈ ಯೋಜನೆಗಳು ಗ್ರಾಮಾಂತರ ಮಟ್ಟದಲ್ಲಿಯೂ ತಲುಪುತ್ತಿದೆಯೇ;

3) ಈ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ ಬಿಡುಗಡೆಯಾಗಿದೆಯೇ;

ಅನುದಾನವನ್ನು ಯಾವ ನಿಯಮಾನುಸಾರ ಬಿಡುಗಡೆ ಮಾಡಲಾಗುವುದು. ಸಂಪೂರ್ಣ ಮಾಹಿತಿ ನೀಡುವುದು;

4) ವಿಜಯಪುರ ಜಿಲ್ಲೆಯಲ್ಲಿ ಈ ಯೋಜನೆಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ವಿವರ ನೀಡುವುದು)

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

1) ಯುವ ಸಬಲೀಕರಣ ಮತ್ತು ಕ್ರೀಡಾ ಯೋಜನೆಗಳ ಪಟ್ಟಿಯನ್ನು ಅನುಬಂಧ–'ಅ'ನಲ್ಲಿ ಲಗತ್ತಿಸಿದೆ.

2014–15ನೇ ಸಾಲಿನಲ್ಲಿ ಈ ಕೆಳಕಾಣಿಸಿದ 3 ಹೊಸ ಯೋಜನೆಗಳನ್ನು ಜಾರಿಗೆ ತರಲಾಗಿದೆ.

1. ಯುವ ಶಕ್ತಿ ಕೇಂದ್ರ
2. ಗ್ರಾಮೀಣ ಕ್ರೀಡೋತ್ಸವ
3. ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ

2) ಹೌದು. ಈ ಯೋಜನೆಗಳು ಗ್ರಾಮಾಂತರ ಮಟ್ಟದಲ್ಲಿಯೂ ತಲುಪುತ್ತಿವೆ.

3) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ರಾಜೀವ್ ಗಾಂಧಿ ಖೇಲ್ ಯೋಜನೆಯಡಿ ತಾಲ್ಲೂಕುಮಟ್ಟ, ಜಿಲ್ಲಾಮಟ್ಟ, ರಾಷ್ಟ್ರಮಟ್ಟದ ಮತ್ತು ರಾಷ್ಟ್ರಮಟ್ಟದ ಕ್ರೀಡಾಕೂಟಗಳಿಗೆ (ಶೇ.100% ಕೇಂದ್ರ ಸರ್ಕಾರದ ಪಾಲು) ₹ 4,50,93,523/–ಗಳ ಅನುದಾನವು ಬಿಡುಗಡೆಯಾಗಿದೆ. ಬ್ಲಾಕ್ ಮಟ್ಟದ ಕ್ರೀಡಾ ಸಂಕೀರ್ಣಕ್ಕೆ ತಲಾ ₹ 80.00 ಲಕ್ಷದಂತೆ (ಕೇಂದ್ರದ ಪಾಲು 75% ಮತ್ತು ರಾಜ್ಯದ ಪಾಲು 25%) ಒಟ್ಟು 36 ಬ್ಲಾಕ್ ಕ್ರೀಡಾ ಸಂಕೀರ್ಣಗಳಿಗೆ ಪ್ರಸ್ತಾವನೆ ಕಳುಹಿಸಲಾಗಿದ್ದು, ಕೇಂದ್ರದ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಅನುದಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಬಿಡುಗಡೆ ಮಾಡಲಾಗುವುದು.

4) ವಿಜಯಪುರ ಜಿಲ್ಲೆಗೆ ಈ ಕೆಳಕಾಣಿಸಿದ ಯೋಜನೆಗಳಿಗಾಗಿ ಬಿಡುಗಡೆ ಮಾಡಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಯಾದ ಆರ್.ಜಿ.ಕೆ.ಎ ಅಡಿ ಗ್ರಾಮೀಣ ಕ್ರೀಡಾಕೂಟಕ್ಕೆ	₹ 13.83 ಲಕ್ಷ
ಮಹಿಳಾ ಕ್ರೀಡಾಕೂಟಕ್ಕೆ	₹ 1.42 ಲಕ್ಷ
2010–11ನೇ ವರ್ಷದ ಅರ್ಜನ ಮತ್ತು ಕಾರ್ಯಚರಣೆ ಅನುದಾನ	₹ 4.00 ಲಕ್ಷ
ಗರಡಿ ಮನೆ ನಿರ್ಮಾಣ 1. ಬಿಜಾಪುರ ಜಿಲ್ಲೆಯ ಕನಮಡಿ ಗ್ರಾಮ (5.00) ಲಕ್ಷ 2. ಬಸವನ ಬಾಗೇವಾಡಿ ತಾಲ್ಲೂಕು ಎರನಾಳ ಗ್ರಾಮ (2.00 ಲಕ್ಷ)	₹ 7.00 ಲಕ್ಷ
ನಮ್ಮೂರು ಶಾಲೆ ನಮ್ಮೂರ ಯುವಜನರು ಯೋಜನೆ	₹ 4.00 ಲಕ್ಷ
ಗ್ರಾಮೀಣ ಕ್ರೀಡೋತ್ಸವ	₹ 7.50 ಲಕ್ಷ
ಒಟ್ಟು	₹ 37.75

ಅನುಬಂಧ–ಅ

ವಿಧಾನ ಸಭೆಯ ಸದಸ್ಯರಾದ ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ಪಾಡಗೌಡ (ಮುದ್ದೇಬಿಹಾಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2401 ಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಯೋಜನೆಗಳ ವಿವರ

	ರಾಜ್ಯ ವಲಯ ಯೋಜನೆಗಳು
1	ಯುವ ಸ್ಪೂರ್ತಿದಾಯಕ ಕಾರ್ಯಕ್ರಮಗಳು
	ಯುವಜನೋತ್ಸವ
	ರಾಜ್ಯ ಯುವ ಕೇಂದ್ರ
	ರಾಜ್ಯ ಯುವಜನ ಕೇಂದ್ರದಲ್ಲಿ ಒಳಾಂಗಣ ಚಟುವಟಿಕೆಗಳು
	ಜಿಲ್ಲಾ ಹಾಗೂ ರಾಜ್ಯಮಟ್ಟದ ಯುವಜನ ಸಮ್ಮೇಳನ ಮತ್ತು ಕಾರ್ಯಾಗಾರ, ಜಿಲ್ಲಾ ಯುವ ಪ್ರಶಸ್ತಿ
	ಯುವ ನೀತಿ ಅನುಷ್ಠಾನ
	ಯುವ ಶಕ್ತಿ ಕೇಂದ್ರ (ಹೊಸ ಯೋಜನೆ)
	ನಮ್ಮೂರು ಶಾಲೆಗೆ ನಮ್ಮ ಯುವಜನರು
	ಯುವಜನ ವಸತಿ ನಿಲಯ
2	ಕ್ರೀಡಾ ಕಾರ್ಯಚಟುವಟಿಕೆಗಳು
	ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ
	ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಸಾಧನೆ ಮಾಡುವ ಕ್ರೀಡಾಪಟುಗಳು ಶೈಕ್ಷಣಿಕ ಶುಲ್ಕ ಮರುಪಾವತಿ
	ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಮೂರಕ ವೆಚ್ಚಗಳು (ಪಗದು ಪ್ರಶಸ್ತಿ)
	ಕರ್ನಾಟಕ ಸ್ಪೋರ್ಟ್ಸ್ ಅಕಾಡೆಮಿ ಫಾರ್ ಎಕ್ಸಲೆನ್ಸ್
	ಶಾಸಕರ ಕ್ರೀಡಾಕೂಟ
	ಕ್ರೀಡಾ ಶಾಲೆಗಳು ಮತ್ತು ನಿಲಯಗಳು
	ಕರ್ನಾಟಕ ಕ್ರೀಡಾ ಪ್ರಾಧಿಕಾರ
	ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ
	ಗ್ರಾಮೀಣ ಕ್ರೀಡೆಯಮತ್ತು ಪಂದ್ಯಗಳು (ಗ್ರಾಮೀಣ ಕ್ರೀಡೋತ್ಸವ)
	ಗರಡಿ ಮನೆ
	ಯುವ ಸಂಜೀವಿನಿ
	ಬಂಡವಾಳ ವೆಚ್ಚ
	ರಾಜ್ಯ ಮಟ್ಟದ ಕ್ರೀಡಾಂಗಣಗಳ ನಿರ್ಮಾಣ
	ವಿದ್ಯಾನಗರ ಆವರಣ ಅಭಿವೃದ್ಧಿಗಾಗಿ
	ಕುಂಬಳಗೋಡು ತರಬೇತಿ ಕೇಂದ್ರ ಅಭಿವೃದ್ಧಿ
	ಕ್ರೀಡಾ ಸಂಸ್ಥೆಗಳು ಮತ್ತು ನಿಲಯ (ವೇತನ)
	ಪ್ರಚಾರ ಆಂದೋಲನ
	ಸೇವಾನಿರತ ಇಲಾಖಾ ಅಧಿಕಾರಿಗಳು ಮತ್ತು ಕರಡಿಮಜಲರಿಗೆ ಕರಡಿ ಕಾರ್ಯಕ್ರಮ
	ವಿಶೇಷ ಘಟಕ ಯೋಜನೆ
	ಗಿರಿಜನ ಉಪಯೋಜನೆ
	ಯೋಜನೇತರ
	ವೇತನ ಮತ್ತು ಇತರೆ ಭತ್ಯೆಗಳು
	ಆಡಳಿತಾತ್ಮಕ ಮತ್ತು ಇತರೆ ವೆಚ್ಚ
	ಕಾರ್ಯಕ್ರಮಗಳು / ತರಬೇತಿ
	ರಾಜ್ಯ ಯುವ ಕೇಂದ್ರ
	ಕ್ರೀಡೆ (ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ)
	ಸಹಾಯಾನುದಾನ (GIA) ವೇತನ ಮತ್ತು ಇತರೆ ಭತ್ಯೆ

	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಪಂಚಾಯತ್ ವಲಯದ ಯೋಜನೆಯ ವಿವರ
	ಯೋಜನೆ
	ಕ್ರೀಡಾಕೂಟ ಮತ್ತು ಕ್ಯಾಲೆಗಳ ಸಂಘಟನೆ ಮತ್ತು ಅದರಲ್ಲಿ ಭಾಗವಹಿಸಿದವರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ
	ಕ್ರೀಡಾಂಗಣಗಳ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ ಸಣ್ಣಕಾಮಗಾರಿಗಳು
	ಕ್ರೀಡಾ ಶಾಲೆಗಳು
	ಕಷ್ಟಪರಿಸ್ಥಿತಿಯಲ್ಲಿರುವ ಕ್ರೀಡಾ ಪಟುಗಳು/ ಕುಸ್ತಿ ಗಾರರಿಗೆ ಆರ್ಥಿಕ ನೆರವು – 50 ವರ್ಷ ಮೇಲ್ಪಟ್ಟ ಕಷ್ಟಪರಿಸ್ಥಿತಿಯಲ್ಲಿರುವ ವರ್ಷಕ ಆದಾಯ ರೂ.20,000/-ಗಳಿಗಿಂತ ಕಡಿಮೆ ಇರುವ ಮಾಜಿ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನ ನೀಡಲಾಗುವುದು
	ಗ್ರಾಮೀಣ ಕ್ರೀಡಾ ಕೇಂದ್ರಗಳು
	ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರ ನಿರ್ಮಾಣಕ್ಕೆ ಅನುದಾನಗಳು
	ಯೋಜನೇತರ
	ನಿರ್ದೇಶನ ಮತ್ತು ಆಡಳಿತ್ಮಕ ಸಂಯುಕ್ತ ಕ್ರೀ ಅಧಿಕಾರಿಗಳು
	ವಿದ್ಯಾರ್ಥಿಗಳುಮತ್ತು ವಿದ್ಯಾರ್ಥಿಯೇತರರಿಗೆ ಧನ ಸಹಾಯ
	ಕ್ರೀಡಾ ಸಮಾಗ್ರಿಗಳನ್ನು ಕೊಳ್ಳಲು ಮತ್ತು ಕ್ರೀಡಾ ಬಯಲು ಅಭಿವೃದ್ಧಿ ಗೊಳಿಸಲು ವಿದ್ಯಾ ಮತ್ತು ಇತರೇ ಸಂಸ್ಥೆಗಳಿಗೆ ಸಹಾಯ
	ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ
	ಕ್ರೀಡಾ ಸಾಮಾಗ್ರಿಗಳ ಖರೀದಿಗಾಗಿ ಜಿಲ್ಲಾ ವಿಭಾಗೀಯ ಯುವಜನ ಸೇವೆಗಳ ಮಂಡಳಿಗೆ ಸಹಾಯ